ಶ್ರೀಮತಿ ಎಸ್. ಪ್ರಮಿಳಾ.—ಸ್ವಾಮಿ, ಹೆಣ್ಣು ಮಕ್ಕಳು ಓಡಾಡುವ ಕಡೆ ರೌಡಿಗಳ ಸಂಖ್ಯೆ ಬಹಳ ಜಾಸ್ತಿಯಾಗಿದೆ. ಈ ರೌಡಿಗಳ ಒಂದು ಪಟ್ಟಿಯನ್ನು ಬರೇ ಪೋಲೀಸ್ ಸ್ಟೇಷನ್‌ನಲ್ಲಿ ಹಾಕಿದರೆ ಸಾಲದು ಅದನ್ನು ಪತ್ರಿಕೆಗಳ ಮುಖಾಂತರ ಪ್ರಕಟಣೆ ಮಾಡಿದರೆ ಯಾರ್ಯಾರು ರೌಡಿಗಳು ಇದ್ದಾರೆ ಎನ್ನುವುದನ್ನು ಜನ ಸಾಮಾನ್ಯರು ತಿಳಿದುಕೊಂಡು ತಕ್ಕ ಬಂದೋಬಸ್ತಿನಲ್ಲಿ ಇರುವುದಕ್ಕೆ ಅನುಕೂಲವಾಗುತ್ತದೆ. ಈ ಬಗ್ಗೆ ಏನಾದರೂ ಒಂದು ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಅದು ಮಾನ್ಯ ಸದಸ್ಯರ ಸಲಹೆ, ಅಷ್ಟೆ.

ಅಧ್ಯಕ್ಷರು.—ಹೆಣ್ಣು ಮಕ್ಕಳು ಪೋಲೀಸ್ ಕಮೀಷನರ್ ಆದರೆ ಅದೆಲ್ಲಾ ಸರಿಹೋಗುತ್ತದೆ.

Employees working on daily wages in Mines and Geology Department

874 SRI K. RAMA BHATT (Puttur).—Will the Chief Minister be pleased to state :—

(*a*) the total number of employees working on daily wages in Borewell Drilling Machine Division of Underground water Research Cell, in Mines and Geology Department of the State ;

(*b*) whether the Rigmen are temporary workers or permanent workers ;

(*c*) the daily wages of the said Rigmen ;

(*d*) whether the Rigmen are entitled to leave benefits and whether they are provided with uniforms and footwear ;

(*e*) whether there is a proposal before the Government to treat them as Government servants?

SRI B. SUBBAYYA SHETTY (Minister for Education) [On behalf of SRI D. DEVARAJ URS (Chief Minister)]—

(*a*) 160.

(*b*) Temporary basis.

(*c*) From 5 to 7 Rupees.

(*d*) No.

(*e*) The matter is under consideration.

ಶ್ರೀ ಕೆ. ರಾಮಭಟ್.—ಸ್ವಾಮಿ, ಈ ಪ್ರಶ್ನೆಯ (ಅ)ಗೆ ಉತ್ತರವಾಗಿ ೧೬೦ ಜನರು ಎಂದು ಹೇಳಿದ್ದೀರಿ. ಇವರು ಎಷ್ಟು ವರ್ಷದಿಂದ ತಾತ್ಕಾಲಿಕ ನೌಕರರಾಗಿ ಕೆಲಸ ಮಾಡುತ್ತಿದ್ದಾರೆ ಅನ್ನುವುದನ್ನು ಹೇಳುತ್ತೀರಾ?

† ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಅವರು ೬ ತಿಂಗಳಿನಿಂದ ಕೆಲಸ ಮಾಡುತ್ತಿದ್ದಾರೆ. ಬೇರೆ ಬೇರೆ ಹಂತದಲ್ಲಿ ೪ ವರ್ಷದಿಂದ ೬ ವರ್ಷದವರೆಗೂ ಕೂಡ ಕೆಲಸ ಮಾಡುವವರೂ ಇದ್ದಾರೆ.

ಶ್ರೀ ಕೆ. ರಾಮಭಟ್.—ಸ್ವಾಮಿ, ಈ ಪ್ರಶ್ನೆಯ (ಈ)ಗೆ ಉತ್ತರವಾಗಿ ಈ ವಿಷಯ ಪರಿಶೀಲನೆಯಲ್ಲಿದೆ ಎಂದು ಹೇಳುತ್ತೀರಿ. ಆದಲ್ಲದೇ ಅನೇಕ ಸಂದರ್ಭಗಳಲ್ಲಿ ಇಂಥಾ ಪ್ರಶ್ನೆಗಳನ್ನು ಹಾಕಿದಾಗ ಅದು ಸರ್ಕಾರದ ಪರಿಶೀಲನೆಯಲ್ಲಿದೆ ಅಂತ ಉತ್ತರ ಬರುತ್ತದೆಯೇ ವಿನಾ ಒಂದು ನಿಶ್ಚಿತವಾದ

ಸಮಯದಲ್ಲಿ ಇದನ್ನು ಮಾಡಿಕೊಡುತ್ತೇವೆ ಸ್ಪಷ್ಟ ಉತ್ತರ ಬರುವುದಿಲ್ಲ. ಆದುದರಿಂದ ಈಗಲಾದರೂ ಕೂಡ ಇದನ್ನು ಎಷ್ಟು ಸಮಯದಲ್ಲಿ ಮಾಡಿಕೊಡುತ್ತೇನೆಂದು ತಾವು ಭರವಸೆ ಕೊಡುತ್ತೀರಿ?

SRI B. SUBBAYYA SHETTY.—Recently the proposal has come to the Government and it is under consideration. That is all I could say at the present moment.

Electrification of Villages of Gulbarga District

909 SRI M. Y. PATIL (Afzalpur).—Will the Minister of State for Information and Youth Services be pleased to state :—

(*a*) the number of villages in Gulbarga Taluk which have not been supplied with electricity ;

(*b*) if so, when the electricity will be provided to such villages in Gulbarga Taluka ?

SRI K. H. SRINIVAS (Minister of State for Information and Youth Services).—

(*a*) 35

(*b*) Electrification will be done subject to availability of funds.

ಶ್ರೀ ಎಂ. ವೈ. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಮಂತ್ರಿಗಳೆಲ್ಲರೂ ಕೂಡ ಯಾವ ಪ್ರಶ್ನೆ ಕೇಳಿದರೂ ಸಹ ಇದನ್ನು ಪರಿಶೀಲನೆ ಮಾಡುತ್ತೇವೆ ಇಲ್ಲವೇ ಹಣದ ಅಭಾವ ಇದೆ ಎಂದು ಈ ಎರಡು ಉತ್ತರಗಳನ್ನು ಕೊಡುತ್ತಾ ಬರುತ್ತಾರೆ. ಮತ್ತು ಎರಡನೆಯದಾಗಿ ಇದನ್ನು ಮುಂದುವರೆಸಿ ಕೇಳಿದರೂ ಕೂಡ ಆಗ ಅವರು ಇದನ್ನು ಪರಿಶೀಲಿಸಲಾಗುತ್ತದೆ ಇಲ್ಲವೇ ಹಣದ ಅಭಾವ ಇದೆ ಅನ್ನುವ ಉತ್ತರವನ್ನೆ ಕೊಡುತ್ತಾರೆ, ನಮ್ಮ ಗುಲ್ಬರ್ಗ ತಾಲೂಕು ಹೆಡ್ ಕ್ವಾರ್ಟರ್ಸ್ ಏನಿದೆ ಇದು ಒಂದು ದೊಡ್ಡ ಟೌನ್ ಮತ್ತು ಇದು ಒಂದು ಡಿವಿಷನಲ್ ಹೆಡ್ ಕ್ವಾರ್ಟರ್ಸ್. ಇದರ ಸುತ್ತ ಮುತ್ತ ೩೫ ಹಳ್ಳಿಗಳು ಏನು ಇವೆ ಅವುಗಳಲ್ಲಿ ಯಾವುದಕ್ಕೂ ಕೂಡ ೩೦ ವರ್ಷಗಳಿಂದ ಎಲೆಕ್ಟ್ರಿಸಿಟಿ ಸಪ್ಲೈ ಆಗಿಲ್ಲಾ. ಇದುವರೆಗೂ ಕೂಡ ಅಲ್ಲಿ ವಿದ್ಯುತ್ ಸಪ್ಲೈ ಆಗದೇ ಇರುವುದಕ್ಕೆ ಕಾರಣ ಏನು ಅನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸುತ್ತೀರಾ?

† ಶ್ರೀ ಕೆ. ಹೆಚ್. ಶ್ರೀನಿವಾಸ್.—ಸನ್ಮಾನ್ಯ ಅಧ್ಯಕ್ಷರೇ ಅವರ ಮೊದಲನೇ ಪ್ರಶ್ನೆಗೆ ಉತ್ತರ ಹೇಳುವುದಾದರೆ ಸರ್ಕಾರದ ಉತ್ತರದಲ್ಲಿ ಪರಿಶೀಲನೆ ಮತ್ತು ಹಣದ ಅಭಾವ ಅನ್ನುವುದನ್ನು ಇರುವ ವಿಷಯವನ್ನು ನಾವು ಹೇಳುತ್ತಿದ್ದೇವೇ ವಿನಾ ಬೇರೆ ವಿಷಯವನ್ನು ಹೇಳುತ್ತಿಲ್ಲ. ಅದಲ್ಲದೆ ಬೇರೆ ರೀತಿಯಾದ ಉತ್ತರ ಕೊಡಬೇಕು ಎಂದು ಅವರು ಸೂಚನೆ ಕೊಟ್ಟರೆ ಅದನ್ನೂ ಸಹ ಪರಿಶೀಲನೆ ಮಾಡುತ್ತೇವೆ. ಎರಡನೆಯದಾಗಿ ಗುಲ್ಬರ್ಗಾ ತಾಲ್ಲೂಕಿನಲ್ಲಿ ೧೩೭ ಹಳ್ಳಿಗಳು ಏನು ಇದ್ದಾವೆ ಅವುಗಳ ಪೈಕಿ ಜೂನ್ ೧೯೭೮ರ ವರೆಗೆ ೧೦೨ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಪೂರೈಕೆಯಾಗಿದೆ. ಈ ೩೫ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವ ಬಗ್ಗೆ ೧೨ ಹಳ್ಳಿಗಳಿಗೆ ಈವಾಗ ಪ್ರೋಗ್ರಾಂ ಅನ್ನು ತೆಗೆದುಕೊಂಡಿದ್ದೇವೆ, ಅಲ್ಲಿಗೆ ಇನ್ನು ೨೩ ಹಳ್ಳಿಗಳು ಮಾತ್ರ ಉಳಿಯುತ್ತದೆ. ಇದನ್ನು ನಮ್ಮ ರಾಜ್ಯಕ್ಕೇ ಆಗಲಿ ಅಥವಾ ರಾಷ್ಟ್ರಕ್ಕೇ ಆಗಲಿ ಹೋಲಿಸಿದರೆ ಈಗ ನಾವು ಅಲ್ಲಿ ಮಾಡಿರುವುದು ಅತಿ ಹೆಚ್ಚಿನ ಪ್ರಮಾಣದಲ್ಲಿ ಅಲ್ಲಿ ವಿದ್ಯುತ್ ಪೂರೈಕೆಯಾಗಿದೆ ಎಂದು ಹೇಳುತ್ತೇನೆ. ಇದು ನಿಧಾನವಾಗುವುದಕ್ಕೆ ಕಾರಣ ಸ್ಪಷ್ಟವಾಗಿ ಎಲ್ಲರಿಗೂ ಗೊತ್ತಿದೆ. ಎಲ್ಲಾ ಕಡೆಗೂ ಕೂಡ ವಿದ್ಯುತ್ ಪೂರೈಕೆ ಬೇಡಿಕೆ ಇದೆ. ಎಲ್ಲಾ ಗ್ರಾಮಗಳಿಗೂ ಕೂಡ ಈ ವಿದ್ಯುತ್ ಪೂರೈಕೆಯನ್ನು ಮಾಡಬೇಕು. ಮತ್ತು ಪಂಪುಸೆಟ್ಟುಗಳಿಗೂ ಕೂಡ ವಿದ್ಯುತ್